O.S. No.73/2021 -PW-1

ದಿನಾಂಕ 20-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ. ವಿ ಬಿ ಎಚ್ ವಕೀಲರಿಂದ.

ಈ ದಾವೆಯಲ್ಲಿ ನಾನು ವಾದಿಯ ಪಿ ಎ ಹೋಲ್ಡರ್ ಆಗಿದ್ದು, ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ದಿನ ಮಾನ್ಯ ನ್ಯಾಯಾಲಯಕ್ಕೆ ವಾದಿ ನನಗೆ ಬರೆದುಕೊಟ್ಟ ದಿನಾಂಕ 18-01-2024 ರ ಎಸ್ ಪಿ ಎ ಅನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಅಲ್ ಅಮಿನ್ ಮೆಡಿಕಲ್ ಕಾಲೇಜ್ ಆಸ್ಪಿಟಲ್, ವಿಜಯಪುರ ರವರು ವಾದಿಗೆ ಸಂಬಂಧಿಸಿ ನೀಡಿದ ವೈಧ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಸರ್ವೇ ನಂಬರ 48/1, 48/2, 48/3, ರ ಪಹಣಿಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 5 ಎಂದು, ಸಿ ಟಿ ಎಸ್ ನಂಬರ 835, 837, 838, 839, 840, 841, 842, ರ ರೂಲ್ಡ ಕಾರ್ಡನ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 6 ರಿಂದ 12, ಬಾಪು ನಿಂಗಪ್ಪ ತುಳಸೆ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 13 ಎಂದು, ನಿಂಗಪ್ಪ ಬಾಪು ತುಳಸೆ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 14 ಎಂದು, ಜಯಶ್ರೀ ನಿಂಗಪ್ಪ ತುಲಸಿ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 15 ಎಂದು, ಎಮ್ ಇ ನಂಬರ 465 ಮತ್ತು 356 ರ ದೃಢಿಕೃತ ನಕಲುಗಳನ್ನು ಒಟ್ಟಾರೆಯಾಗಿ ನಿಪಿ 16 ಎಂದು, ಬಾಪಣ್ಣ ನಿಂಗಪ್ಪ ತುಳಸೆ ರವರ ಕುಟುಂಬದ ಉತ್ತರ ಜೀವಿತ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 17, ಸರ್ವೇ ನಂಬರ 48 ರ 1984-1985 ನೇ ಸಾಲಿನಿಂದ 2001-2022 ರ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಪಿ 18 ಎಂದು ಗುರುತಿಸಲಾಯಿತು.

O.S. No.73/2021 -PW-1

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.